# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 153 |
| ಸದಸ್ಯರ ಹೆಸರು | ಶ್ರೀ ಕೆ. ಹರೀಶ್ ಕುಮಾರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 14.02.2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸುಮಾರು 25 ವರ್ಷಗಳಿಂದ ಅಕ್ರಮ-ಸಕ್ರಮದಡಿ ಭೂಮಂಜೂರಾತಿ ಗೊಂಡು ಜಮೀನು ಪೋಡಿ (ಪ್ಲಾಪಿಂಗ್) ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ ರೈತರಿಗೆ ಮನೆ ಕಟ್ಟಲು, ಕನ್ವರ್ಷನ್ ಇತ್ಯಾದಿ ಸಮಸ್ಯೆಗಳಿಂದ ರೈತರು ಗೊಂದಲದಲ್ಲಿರುವುದು ಹಾಗೂ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? | ದರಖಾಸ್ತು ಪ್ರಕರಣಗಳಲ್ಲಿ ಪೋಡಿ ಮಾಡಲು ಈ ಕೆಳಗಿನ ಮಂಜೂರಿ ದಾಖಲೆಗಳು ಅವಶ್ಯವಿರುತ್ತದೆ.<br>1. ಭೂಮಂಜೂರಿ ಆದೇಶ.<br>2. ಸಾಗುವಳಿ ಚೀಟಿ / ಹಕ್ಕು ಪತ್ರ.<br>3. ಅನುಮೋದಿತ ರೆವಿನ್ಯೂ ನಕ್ಷೆ.<br>4. ಪೋಡಿ ಶುಲ್ಕ ಕಂದಾಯವಾಗಿರುವ ಬಗ್ಗೆ ದೃಢೀಕರಣ ಪತ್ರ/ ವಿನಾಯಿತಿ ಪತ್ರ.<br>5. ಚಾಲ್ತಿ ಆರ್.ಟಿ.ಸಿ & ಮಂಜೂರಿದಾರರಿಗೆ ಸಂಬಂಧಿಸಿದ ಮ್ಯುಟೇಷನ್ ನಕಲು.<br>ಮೇಲ್ಕಂಡ ದಾಖಲೆಗಳನ್ನು ಪರಿಶೀಲಿಸಿಕೊಂಡು ಕಂದಾಯ ವಿಭಾಗದಿಂದ ನಮೂನೆ 1 ರಿಂದ 5 ನ್ನು ಭರ್ತಿ ಮಾಡಿ ದೃಢೀಕರಿಸಿ ಅಳತೆಗಾಗಿ ಭೂಮಾಪನ ಶಾಖೆಗೆ ಕಡತ ಸ್ವೀಕೃತವಾದಲ್ಲಿ, ಪರಿಶೀಲಿಸಿ ನಮೂನೆ 6 ರಿಂದ 10 ನ್ನು ಭರ್ತಿ ಮಾಡಿ ನಿಯಮಾನುಸಾರ ದುರಸ್ತಿ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | ದರಖಾಸ್ತು ಪೋಡಿ ಪ್ರಕರಣಗಳಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಳೆದ 6 ತಿಂಗಳಲ್ಲಿ ಸಾಧಿಸಿದ ಪ್ರಗತಿ ಈ ಕೆಳಕಂಡಂತಿದೆ. |

| ಜಿಲ್ಲೆ | ಪ್ರಾಶಿಲ್ಕು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಭೂ ಮಾಪನ ಶಾಖೆಯಲ್ಲಿ ಬಾಕಿ |
|---|---|---|---|---|---|---|---|
| ಉಡುಪಿ | 3114 | 432 | 3546 | 806 | 2740 | 1747 | 993 |
| ದಕ್ಷಿಣ ಕನ್ನಡ | 4077 | 575 | 4652 | 754 | 3898 | 3350 | 548 |

ಬಾಕಿ ಇರುವ ದರಖಾಸ್ತು ಪ್ರಕರಣಗಳನ್ನು ಆಧ್ಯತೆಯ ಮೇರೆಗೆ ವಿಲೇವಾರಿ ಮಾಡುವ ನಿಟ್ಟಿನಲ್ಲಿ ದರಖಾಸ್ತು ಆಂದೋಲನ ಕಾರ್ಯಕ್ರಮ ಹಮ್ಮಿಕೊಂಡು ಎಲ್ಲಾ ಸರ್ಕಾರಿ ಭೂಮಾಪಕರನ್ನು ಸದರಿ ವಿಲೇವಾರಿ ಕಾರ್ಯಕ್ಕೆ ನಿಯೋಜಿಸಿ ಪ್ರಗತಿ ಕಾರ್ಯ ಸಾಧಿಸಲಾಗುತ್ತಿದೆ.

ಮುಂದುವರೆದು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 95(2) ರಡಿಯಲ್ಲಿ ಕಲ್ಪಿಸಲಾದ ಅವಕಾಶದಂತೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಬದಲಾಯಿಸಲು ಇರುವ ಭೂ ಪರಿವರ್ತನಾ ವಿಧಾನವನ್ನು ಸರಳೀಕರಣಗೊಳಿಸಿ ಆದೇಶ ಹೊರಡಿಸಲಾಗಿದೆ. ಈ ಆದೇಶದಂತೆ ಭೂ ಪರಿವರ್ತನೆಗಾಗಿ ಆನ್‌ಲೈನ್ ತಂತ್ರಾಂಶದ ಮೂಲಕ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಮುಂದಿನ 30 ದಿನಗಳೊಳಗಾಗಿ ಭೂ ಪರಿವರ್ತನೆ ಆದೇಶ / ಹಿಂಬರಹವನ್ನು ಹೊರಡಿಸಲಾಗುವುದು. ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಮಾಸ್ಟರ್ ಪ್ಲಾನ್ ಆಧಾರಿತ ತಂತ್ರಾಂಶವನ್ನು ರೂಪಿಸಿದ್ದು, ಈ ತಂತ್ರಾಂಶದ ಮೂಲಕ 7 ದಿನಗಳೊಳಗಾಗಿ ಭೂ ಪರಿವರ್ತನೆ ಆದೇಶ ಹೊರಡಿಸಲಾಗುತ್ತಿದೆ.

ಈ ರೀತಿಯ ಆನ್‌ಲೈನ್ ತಂತ್ರಾಂಶ ಜಾರಿಗೊಳಿಸಿರುವುದರಿಂದ ರೈತರು ಕಛೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲಾಗಿರುತ್ತದೆ.

**ಸಂಖ್ಯೆ: ಕಂಇ 14 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು